ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 31/3/2011

### ಮಹಾಲೇಖಪಾಲರ ವರದಿಯಲ್ಲಿ ಬಹಿರಂಗ । ಭ್ರಷ್ಟಾಚಾರ ನಡೆದಿರುವ ಶಂಕೆ


# ಅಧಿಕಾರಿಗಳ ಖಾತೆಯಲ್ಲಿ ಕೊಳೆಯುತ್ತಿದೆ ಕೋಟ್ಯಂತರ ರೂ.!

■ **ಶಿವಾನಂದ ಹಿರೇಮಠ** ಬೆಂಗಳೂರು
shivanand.hiremath@timesgroup.com

ವಿವಿಧ ಇಲಾಖಾ ಅಧಿಕಾರಿಗಳ ವೈಯಕ್ತಿಕ ಖಾತೆಯಲ್ಲಿ ಸರಕಾರದ ಕೋಟ್ಯಂತರ ರೂ. ಠೇವಣಿ ರೂಪದಲ್ಲಿ ಕೊಳೆಯುತ್ತಿರುವುದನ್ನು ಭಾರತೀಯ ನಿಯಂತ್ರಕರು ಹಾಗೂ ಮಹಾಲೇಖಪಾಲರ ವರದಿ ಬಹಿರಂಗಪಡಿಸಿದೆ.

ಮೂರು ವರ್ಷಗಳಿಂದ ಅಧಿಕಾರಿಗಳು ತಮ್ಮ ವೈಯಕ್ತಿಕ ಖಾತೆಗಳಲ್ಲಿ ಸುಮಾರು 7100 ಕೋಟಿ ರೂ. ಗಳಷ್ಟು ಹಣವನ್ನು ಠೇವಣಿ ರೂಪದಲ್ಲಿ ಇರಿಸಿಕೊಂಡಿದ್ದು ಭ್ರಷ್ಟಾಚಾರದ ಶಂಕೆ ವ್ಯಕ್ತವಾಗುತ್ತಿದೆ ಎಂದು ವರದಿಯಲ್ಲಿ ಶಂಕಿಸಲಾಗಿದೆ.

ಸಾರ್ವಜನಿಕ ಹಣದ ಮೇಲೆ ನಿಖರತೆ, ಪಾರದರ್ಶಕತೆ ಮತ್ತು ಸಂಪೂರ್ಣತೆ ಕಾಯ್ದುಕೊಳ್ಳಲು ಸರಕಾರ ವಿಫಲವಾಗಿದೆ. ಸಾಲದ ಸುಳಿಯಲ್ಲಿರುವ ಕೋಟ್ಯಂತರ ರೂ. ಹಣವನ್ನು ಅಧಿಕಾರಿಗಳ ಖಾತೆಗಳಲ್ಲಿ ಕೊಳೆಯಲು ಬಿಟ್ಟಿರುವುದು ಆಶ್ಚರ್ಯ ಹುಟ್ಟಿಸಿದೆ. ಹಲವು ಯೋಜನೆಗಳಿಗೆ ಅನುದಾನ ಕೊರತೆ ಎದುರಿಸುತ್ತಿದ್ದರೂ ಇರುವ ಹಣವನ್ನು ಸದ್ಬಳಕೆ ಮಾಡಿಕೊಳ್ಳಲು ವಿಫಲವಾಗಿದೆ.



## 600 ಕೋಟಿ ರೂ. ಹಸ್ತಾಂತರಿಸಿದ್ದರು

ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ ಎಚ್. ಕೆ. ಪಾಟೀಲರು ತಮ್ಮ ಇಲಾಖಾ ವ್ಯಾಪ್ತಿಯಿಂದ ಹೊರಗಿನ ಖಾತೆಗಳಲ್ಲಿದ್ದ ಹಲವಾರು ವರ್ಷಗಳಿಂದ ಠೇವಣಿ ರೂಪದಲ್ಲಿದ್ದ 600 ಕೋಟಿ ರೂಪಾಯಿಗೂ ಹೆಚ್ಚು ಮೊತ್ತವನ್ನು ಶ್ವೇತಪತ್ರದ ಮೂಲಕ ಹಣಕಾಸು ಇಲಾಖೆಗೆ ಹಸ್ತಾಂತರಿಸಿದ್ದರು. 600 ಕೋಟಿ ರೂ. ಠೇವಣಿ ಮೊತ್ತಕ್ಕೆ 225 ಕೋಟಿ ರೂ. ಬಡ್ಡಿಯನ್ನು ಸಿಂಡಿಕೇಟ್ ಬ್ಯಾಂಕ್ ಪಾವತಿಸಬೇಕಿತ್ತು. ಕಾಂಗ್ರೆಸ್ ನೇತೃತ್ವದ ಸರಕಾರ ಪತನಗೊಂಡಿದ್ದರ ಹಿನ್ನೆಲೆಯಲ್ಲಿ ಸರಕಾರಕ್ಕೆ ಬಡ್ಡಿ ಪಾವತಿಸಿಲ್ಲ.

> ರಾಜ್ಯ ಸರಕಾರ ಆರ್ಥಿಕ ನೀತಿ ಬದಲಾಯಿಸುವ ಮೂಲಕ ಆರ್ಥಿಕ ಇಲಾಖೆಗೆ ಸರ್ಜರಿ ಮಾಡಬೇಕು. ಇದೊಂದು ಉದಾಹರಣೆ ಅಷ್ಟೇ. ಪ್ರತಿ ಇಲಾಖಾ ಅಧಿಕಾರಿಗಳ ಪಿಡಿ ಅಕೌಂಟ್‌ಗಳ ಬಗ್ಗೆ ತನಿಖೆ ನಡೆಸಿದರೆ, ಬಳಕೆಯಾಗದೇ ಇರುವ ಸರಕಾರದ ಹಣ ಲೆಕ್ಕಕ್ಕೆ ಸಿಗುತ್ತದೆ. ಶ್ವೇತಪತ್ರದ ಮೂಲಕ ಮರಳಿ ಹಣ ಪಡೆದು ಅಭಿವೃದ್ಧಿಗೆ ಬಳಸಿಕೊಳ್ಳಲಿ
>
> **-ಎಚ್.ಕೆ. ಪಾಟೀಲ** ಶಾಸಕರು

ವಿವಿಧ ಅಧಿಕಾರಿಗಳ 71 ವೈಯಕ್ತಿಕ ಖಾತೆಗಳಲ್ಲಿ 4421.56 ಕೋಟಿ ರೂ. ಮತ್ತು ಮೂರು ವರ್ಷಗಳಿಂದ ಬಳಕೆಯಾಗದೇ 490 ಖಾತೆಯಲ್ಲಿ ಉಳಿದಿರುವ 2741.52 ಕೋಟಿ ರೂ. ಹಣವನ್ನು ಮಹಾಲೇಖಪಾಲರ ವರದಿ ಬಹಿರಂಗಪಡಿಸಿದೆ. ಇತ್ತೀಚೆಗೆ ಸದನದಲ್ಲೂ ಈ ಬಗ್ಗೆ ಗಂಭೀರ ಚರ್ಚೆ ನಡೆದಿತ್ತು. ಅಲ್ಲದೆ, 10,000 ಕೋಟಿ ರೂ.ಗಳಿಗೂ ಹೆಚ್ಚು ಹಣ ಇಲಾಖೆ ಹೊರತುಪಡಿಸಿ ಹೊರಗಿನ ಖಾತೆಗಳಲ್ಲಿದೆ ಎಂದು ಶಾಸಕ ಎಚ್.ಕೆ. ಪಾಟೀಲ ಆರೋಪಿಸಿದ್ದರು.

ಅತಿವೃಷ್ಟಿ, ಅನಾವೃಷ್ಟಿ, ತುರ್ತು ಸಂದರ್ಭದಲ್ಲಿ ಮೂಲ ಸೌಕರ್ಯಗಳಿಗೆ ಅನುದಾನ ವಿನಿಯೋಗಿಸಲು ಅಧಿಕಾರಿಗಳು ತಮ್ಮ ವೈಯಕ್ತಿಕ ಖಾತೆಗಳಲ್ಲಿ ಹಣ ಮೀಸಲಿಟ್ಟಿರುತ್ತಾರೆ. ಸರಕಾರದ ಅನುಮತಿಯೂ ಇರುತ್ತದೆ. ಆಯಾ ಆರ್ಥಿಕ ವರ್ಷದಲ್ಲಿ ಉದ್ದೇಶಿತ ಯೋಜನೆಗಳಿಗೆ ಅ ಅನುದಾನವನ್ನು ಬಳಸಿ, ಉಳಿದ ಅನುದಾನವನ ಇಲಾಖಾ ಖಾತೆಗೆ ಜಮೆ ಮಾಡು ಜವಾಬ್ದಾರಿಯನ್ನು ಆಯಾ ಇಲಾಖಾ ಅಧಿಕಾರಿಗಳ ಹೊಂದಿರುತ್ತಾರೆ. ಜವಾಬ್ದಾರಿ ಹೊತ್ತ ಅಧಿಕಾರಿಗಳ ತಮ್ಮ ಜವಾಬ್ದಾರಿ ಮರೆತಿರುವುದರಿಂದ ಭ್ರಷ್ಟಾಚಾರ ಅನುಮಾನ ಹೊಗೆಯಾಡುತ್ತಿದೆ.